

ಕಿರುನಗೆಯನ್ನು ಮಾತ್ರ ತಪ್ಪದೇ ರವಾನಿಸುತ್ತಿದ್ದ. ವಿಮಾನ ಟೇಕಾಫ್ ಆಗುವ ಪ್ರತಿಬಾರಿಯೂ ಅವನು ಧ್ಯಾನಸ್ಥ ಸ್ಥಿತಿಗೆ ಇಳಿಯುತ್ತಿದ್ದ. ಅವನೇ ಏನು, ವಿಮಾನ ಟೇಕಾಫ್ ಆಗುವಾಗ ತೊಂಬತ್ತು ಪರ್ಸೆಂಟ್ ಪ್ರಯಾಣಿಕರು ಒಂಥರಾ ಉದ್ವೇಗಕ್ಕೆ ಒಳಗಾಗುತ್ತಾರೆ. ಕೆಲವರು ಕಣ್ಮುಚ್ಚಿ ದೇವರುಗಳನ್ನು ನೆನೆಯುತ್ತಾರೆ. ಮತ್ತೆ ಕೆಲವರು ಭಯದಿಂದ ವಿಮಾನದ ಚಲನೆಯನ್ನು ಗಮನಿಸುತ್ತಿರುತ್ತಾರೆ. ಇನ್ನು ಕೆಲವರು ಪುಸ್ತಕ, ಮ್ಯಾಗಜೀನ್‌ಗಳಲ್ಲಿ ಮುಳುಗುತ್ತಾರೆ ಮತ್ತೂ ಕೆಲವರು ಬಾಯಲ್ಲಿ ಸಂಖ್ಯೆಗಳನ್ನು ಎಣಿಸಲು, ಮಂತ್ರಗಳನ್ನು ಪಠಿಸಲು ಪ್ರಾರಂಭಿಸುತ್ತಾರೆ. ವಿಮಾನ ಟೇಕಾಫ್ ಆಗಿ ಆಕಾಶದಲ್ಲಿ ಪ್ರಶಾಂತವಾಗಿ ಚಲಿಸಲು ಶುರುವಾದ ನಂತರ ಒಂದು ರೀತಿಯ ಸಂಭ್ರಮ ವಿಮಾನದ ತುಂಬಾ ಲಗುಬಗೆಯಿಂದ ತುಂಬಿಕೊಳ್ಳುತ್ತದೆ. ಇಷ್ಟೆಲ್ಲಾ ವರ್ಷಗಳ ಸೇವೆಯಲ್ಲಿ ಅವಳು ಇಂಥ ವಾಸ್ತವ ವಿದ್ಯಮಾನಗಳನ್ನು ಮನಗಂಡಿದ್ದಾಳೆ.

ಆದರೆ ಟೇಕಾಫ್‌ಗಿಂತಲೂ ಲ್ಯಾಂಡಿಂಗ್ ಬಹಳವೇ ತ್ರಾಸವಾದದ್ದು ಎಂಬ ಸತ್ಯ ಬಹುಪಾಲು ಪ್ರಯಾಣಿಕರಿಗೆ ಅರಿವಿರುವುದಿಲ್ಲ. ಆಕಾಶದಲ್ಲಿ ಇರುವುದಕ್ಕಿಂತಲೂ ಭೂಮಿಯ ಮೇಲೆ ಇರುವುದೇ ಸುರಕ್ಷಿತ ಎಂಬುದು ಮನುಷ್ಯ ಕಂಡುಕೊಂಡ ಸತ್ಯ. ಸಿದ್ಧಾರ್ಥ ಕುಮಾರ್ ಬಗೆಗಿನ ಇಷ್ಟು ದಿನಗಳ ಕುತೂಹಲವನ್ನು ತಡೆದು ಕೊಳ್ಳಲಾಗದೆ ಇಂದು ವಿಮಾನದಲ್ಲಿ ಪ್ರಯಾಣಿಕರ ಸಂಖ್ಯೆ ಕಡಿಮೆಯಿದ್ದಿದ್ದರಿಂದಾಗಿ ಅವನ ಪಕ್ಕದ ಸೀಟಿನಲ್ಲಿ ಕುಳಿತು ಕೇಳಿದ್ದಳು ಸ್ಮಿತಾ ಶರ್ವಾಣಿ. ಅವಳ ನೀಳ ತಲೆಕೂದಲಿನಿಂದ ಹೊರಹೊಮ್ಮಿದ ಮಾದಕ ಸುವಾಸನೆಯನ್ನು ಒಮ್ಮೆಲೆ ಮೂಗಿನ ಮೂಲಕ ಎದೆಗೂ, ಮನಸ್ಸಿಗೂ ಇಳಿಸಿಕೊಂಡು ಸುಮಾರು ನಲವತ್ತು ವರ್ಷ ವಯಸ್ಸಿನ ಸಿದ್ಧಾರ್ಥ ಕುಮಾರ್ ಎಂಬ ಪ್ರಯಾಣಿಕ 'ಸಾಯಲಿಕ್ಕಾಗಿ' ಎಂದ